**ಸಾಕ್ಷಿಗೆ ದಿನಾಂಕ:28-01-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. HSN ವಕೀಲರಿಂದ ::**

ನಾನು ಪ್ರಸ್ತುತದಲ್ಲಿ ಅಜ್ಜಂಪುರ ಪೇಟೆಯಲ್ಲಿ ವಾಸ ಮಾಡಿಕೊಂಡಿರುತ್ತೇನೆ. 1 ನೇ ಪ್ರತಿವಾದಿ ಸಂಬಂಧದಲ್ಲಿ ನನ್ನ ಮಾವ ಅಂದರೆ ನನ್ನ ಹೆಂಡತಿಯ ತಂದೆ. ಮೀನಾಕ್ಷಮ್ಮ 1 ನೇ ಪ್ರತಿವಾದಿಯ ಹೆಂಡತಿ. 1 ನೇ ಪ್ರತಿವಾದಿ ಹಾಗೂ ನಾನು ಬೇರೆ ಬೇರೆ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿ ಮೀನಾಕ್ಷಮ್ಮ ನಮ್ಮ ಜೊತೆ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತು ನನ್ನ ಹೆಂಡತಿ ಗಾಯತ್ರಿಮ್ಮ ರವರ ಆಸ್ತಿಯ ಪಕ್ಕದಲ್ಲಿ ಇರುತ್ತದೆ, ಆದಕಾರಣ ನನಗೆ ದಾವಾ ಶೆಡ್ಯೂಲ್ ಸ್ವತ್ತಿನ ಬಗ್ಗೆ ತಿಳಿದಿರುತ್ತದೆ. 1 ನೇ ಪ್ರತಿವಾದಿ ಆರೋಗ್ಯವಾಗಿ ಇರುತ್ತಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರಿಗೆ ಈಗ ಒಂದು ರಸ್ತೆ ಅಪಘಾತದ ಕಾರಣ ಕಾಲಿಗೆ ಪೆಟ್ಟಾಗಿರುತ್ತದೆ ಎಂದು ನುಡಿದಿರುತ್ತಾರೆ. ಮೀನಾಕ್ಷಮ್ಮ ಆರೋಗ್ಯವಾಗಿ ಇರುತ್ತಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರಿಗೆ ವಯಸ್ಸಾದ ಕಾರಣ ಅವರಿಗೆ ಕಿವಿ ಹಾಗೂ ಕಣ್ಣಿನ ಸಮಸ್ಯೆ ಇರುತ್ತದೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ಯಾವುದೇ ಜಮೀನು ಅನ್ನು ಸಾಗುವಳಿ ಮಾಡುವಷ್ಟು ಈಗ ಶಕ್ತರಾಗಿರುವುದಿಲ್ಲ ಎಂದರೆ ಸರಿ.

ರಾಜನಹಳ್ಳಿ ಗ್ರಾಮದ ಸರ್ವೇ ನಂಬರ್ 25 ರಲ್ಲಿ ನನ್ನ ಹೆಸರಿಗೆ ಯಾವುದೇ ಜಮೀನು ಇರುವುದಿಲ್ಲ. ವಾದಿ ನನಗೆ ಪರಿಚಯ ಇರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಯು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ 336/2012 ರಂತೆ ಪ್ರತಿವಾದಿಗಳ ಹಾಗೂ ನನ್ನ ಹೆಂಡತಿಯ ವಿರುದ್ದ ಒಂದು ದಾವೆಯನ್ನು ಹೂಡಿದ್ದು, ಸದರಿ ದಾವೆಯು ಬೆಂಗಳೂರಿನ ಭೂ ಕಬಳಿಕೆ ನ್ಯಾಯಾಲಯಕ್ಕೆ ವರ್ಗಾವಣೆ ಆಗಿದ್ದು, ನಂತರ ಸದರಿ ನ್ಯಾಯಾಲಯದಿಂದ ತಹಶೀಲ್ದಾರ್ ರವರಿಗೆ ಅದರ ಬಗ್ಗೆ ಹೇಚ್ಚಿನ ವಿಚಾರಣೆ ಮಾಡುವಂತೆ ಆದೇಶ ಆಗಿರುತ್ತದೆ. ಸದರಿ ಪ್ರಕರಣದಲ್ಲಿ ವಾದಿ ಸರ್ವೇ ನಂಬರ್ 25 ರ 2 ಎಕರೆ 30 ಗುಂಟೆ ಜಮೀನಿನ ಸ್ವಾಧೀನ ಇರುವ ಬಗ್ಗೆ ವರದಿ ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ನನ್ನ ಹೆಂಡತಿ ಹಾಗೂ ಆತನ ತಮ್ಮನಿಗೆ ಸೇರಿದ ಸರ್ವೇ ನಂಬರ್ 60/3 ಮತ್ತು 60/4 ರಲ್ಲಿ ಒಟ್ಟು 8 ಎಕರೆ ಜಮೀನು ಇರುತ್ತದೆ. ಸದರಿ ಆಸ್ತಿಗಳಿಗೆ

ಸಂಬಂಧಪಟ್ಟ ಪಹಣಿಗಳು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಮುಂದೆ ಹಾಜರುಪಡಿಸಲು ತೊಂದರೆ ಇರುತ್ತದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಈಗ ಹೇಳುತ್ತಿರುವ ಜಮೀನಿಗೂ ಮತ್ತು ದಾವಾ ಸರ್ವೇ ನಂಬರ್ 25 ರ ಜಮೀನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸದರಿ ಜಮೀನು ಲಗತ್ತಾಗಿರುವ ಕಾರಣ ಸಂಬಂಧ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 25 ರಲ್ಲಿ ನನಗೆ ಯಾವುದೇ ಜಮೀನು ಇರುವುದಿಲ್ಲ, ಆದರೆ ನನ್ನ ಅತ್ತೆ ಅಂದರೆ 2 ನೇ ಪ್ರತಿವಾದಿಯು ಸದರಿ ಸರ್ವೇ ನಂಬರ್ ಜಾಗದಲ್ಲಿ 4 ಎಕರೆ ಆಸ್ತಿ ಮಂಜೂರಾತಿಗೆ ಸರ್ಕಾರಕ್ಕೆ ಅರ್ಜಿ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಅಸಲು ದಾವಾ 336/2012 ದಾವೆಗೆ ಸಂಬಂಧಪಟ್ಟಂತೆ ಬೆಂಗಳೂರಿನ ಭೂ ಕಬಳಿಕೆ ನ್ಯಾಯಾಲಯದಲ್ಲಿ ಸಂಬಂಧಪಟ್ಟ ತಹಶೀಲ್ದಾರ್ ರವರು ವಾದಿಯೇ ದಾವಾ ಶೆಡ್ಯೂಲ್ ಸ್ವತ್ತಿನ ಸಂಪೂರ್ಣ ಸ್ವಾಧೀನದಲ್ಲಿ ಇರುತ್ತಾರೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವರದಿಯಲ್ಲಿಯೇ 2 ನೇ ಪ್ರತಿವಾದಿ ಬಗರ್ ಹುಕ್ಕುಂ ಆಧಾರದಲ್ಲಿ ಸ್ವಾಧೀನದಲ್ಲಿ ಇರುವ ಜಾಗಕ್ಕೆ ವಾದಿ ಇರುವ ಜಾಗದ ಚೆಕ್ಕುಬಂದಿ ಸುಳ್ಳಾಗಿ ತೋರಿಸಲಾಗಿರುತ್ತದೆ ಎಂದು ಸಹ ತಹಶೀಲ್ದಾರ್ ರವರ ವರದಿಯಲ್ಲಿ ಕಂಡು ಬರುತ್ತದೆ ಎಂದರೆ ಸರಿಯಲ್ಲ. ವಾದಿಯು ಸ್ವಾಧೀನ ಇರುವ ಸರ್ವೇ ನಂಬರ್ 25 ರ ಜಾಗದಲ್ಲಿ ಅವರು ಅಡಿಕೆ ತೋಟವನ್ನು ಅಭಿವೃದ್ಧಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಸರ್ವೇ ನಂಬರ್ 25 ರಲ್ಲಿ ಸ್ವಾಧೀನದಲ್ಲಿ ಇರುವ ಬಗ್ಗೆ ಕಂದಾಯ ಇಲಾಖೆಯ ವರದಿ ಇರುತ್ತದೆ ಎಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: